


ಉತ್ತರ ಕರ್ನಾಟಕದಲ್ಲಿ ಜನಾಶ್ರಯದಿಂದ, ದಕ್ಷಿಣ ಕರ್ನಾಟಕದಲ್ಲಿ ರಾಜಾಶ್ರಯದಿಂದ ಆರಂಭವಾದ ವೃತ್ತಿ ರಂಗಭೂಮಿಯು ಆನಂತರ ವಿವಿಧ ನಾಟಕ ಕಂಪನಿಗಳ ಮೂಲಕ ಆವರಿಸಿಕೊಂಡು ಇತಿಹಾಸ ನಿರ್ಮಿಸಿದ್ದು ಸಾಮಾನ್ಯ ಸಂಗತಿಯಲ್ಲ. ಹವ್ಯಾಸಿ ರಂಗಭೂಮಿಯೇ 'ಶ್ರೇಷ್ಠ' ಎನ್ನಿಸಿಕೊಂಡು ಚರಿತ್ರೆಯನ್ನು ಮರೆತರೆ ಅದು ಶ್ರೇಷ್ಠವಲ್ಲ, ಕನಿಷ್ಠ ಮನೋಧರ್ಮವಾಗುತ್ತದೆ. ಈ ಮಾತನ್ನು ಸಿನಿಮಾ ಮತ್ತು ಸಾಹಿತ್ಯ ಕ್ಷೇತ್ರಗಳಿಗೂ ಅನ್ವಯಿಸಬಹುದಾಗಿದೆ.

ಕನ್ನಡದಲ್ಲಿ ಹೊಸ ಅಲೆಯ, ಕಲಾತ್ಮಕ ಪ್ರಧಾನ ಸಿನಿಮಾಗಳು ನಿರ್ಮಾಣವನ್ನು ಆರಂಭಿಸಿದಾಗ ಮುಖ್ಯವಾಹಿನಿಯ ವ್ಯಾಪಾರ ಪ್ರಧಾನ ಸಿನಿಮಾಗಳನ್ನು ನಿರಾಕರಣೆಯಿಂದ ನೋಡುವ ಪ್ರವೃತ್ತಿಯೊಂದು ದಟ್ಟವಾಯಿತು. ಇದು ಕೂಡ ಶ್ರೇಷ್ಠತೆಯ ಪರಿಕಲ್ಪನೆಯ ಫಲ! ವಾಸ್ತವವಾಗಿ ಯಾವುದೇ ಮಾದರಿಯ ಸಿನಿಮಾಗಳು ಉದ್ಯಮದ ಆಯಾಮವನ್ನು ಸಂಪೂರ್ಣ ನಿರ್ಲಕ್ಷಿಸಿ ಅಥವಾ ನಿರಾಕರಿಸಿ ನಿರ್ಮಾಣವಾಗುವುದಿಲ್ಲ. ಸಿನಿಮಾ ಏಕಕಾಲಕ್ಕೆ ಕಲೆಯೂ ಹೌದು, ಉದ್ಯಮವೂ ಹೌದು. ಬಂಡವಾಳವನ್ನು ತೊಡಗಿಸಿದ ಕೂಡಲೇ ಎಲ್ಲ ಮಾಧ್ಯಮಗಳಿಗೂ ಉದ್ಯಮದ ಆಯಾಮ ತಾನಾಗಿ ಒದಗಿಬರುತ್ತದೆ. ಪ್ರಮಾಣದಲ್ಲಿ ವ್ಯತ್ಯಾಸವಿರಬಹುದು; ಅಷ್ಟೇ. ಹೀಗಾಗಿ, ಚಲನಚಿತ್ರ ಮಾಧ್ಯಮವನ್ನು ಚಲನಚಿತ್ರೋದ್ಯಮ ಎನ್ನುತ್ತೇವೆ. ಪತ್ರಿಕಾ ಮಾಧ್ಯಮವು ಪತ್ರಿಕೋದ್ಯಮವಾಗುತ್ತದೆ. ಪುಸ್ತಕವೆಂಬ ಅಕ್ಷರಾಭಿವ್ಯಕ್ತಿ ಮಾಧ್ಯಮವು ಪುಸ್ತಕೋದ್ಯಮವೆನ್ನಿಸಿಕೊಳ್ಳುತ್ತದೆ. ಈ ವಾಸ್ತವದ ಆಧಾರದಲ್ಲಿ ನಾನು ಮೂರು ದಶಕಗಳಿಗೂ ಹಿಂದೆ ಸಿನಿಮಾವನ್ನು 'ಕಲೋದ್ಯಮ' ಎಂದು ಕರೆದು ಲೇಖನ ಬರೆದಿದ್ದೆ.

ಹೊಸ ಅಲೆ ಸಿನಿಮಾಗಳು ಬಂದ ಕೂಡಲೇ ಬೌದ್ಧಿಕ ವಲಯದ ಅನೇಕರು ಉದ್ಯಮದ ವಾಸ್ತವವನ್ನು ಮರೆತು ಅಥವಾ ಕಡೆಗಣಿಸಿ ತಮ್ಮ ಅಭಿವ್ಯಕ್ತಿ ವಿಧಾನವೇ ಅಂತಿಮ ಹಾಗೂ ಶ್ರೇಷ್ಠವೆಂಬಂತೆ ಭಾವಿಸತೊಡಗಿದರು. ಸತ್ಯ ಸಂಗತಿಯೆಂದರೆ ಕನ್ನಡದ ಹೊಸ ಅಲೆಯ (ಕಲಾತ್ಮಕ) ಸಿನಿಮಾ ಸೃಷ್ಟಿದಾರರಲ್ಲಿ (ಅಥವಾ ಸೂತ್ರದಾರರಲ್ಲಿ) ನವ್ಯ ಸಾಹಿತ್ಯದ ತಾತ್ವಿಕತೆಯೇ ಅಂತರ್ಗತವಾಗಿತ್ತು. ಸಾಮುದಾಯಿಕ ಪ್ರಜ್ಞೆಯ ಬದಲು ವ್ಯಕ್ತಿಪ್ರಜ್ಞೆ ಪ್ರಮುಖವಾಗಿತ್ತು. ಸಿನಿಮಾದ ಶಿಲ್ಪಕ್ಕೆ ಪ್ರಥಮ ಪ್ರಾಶಸ್ತ್ಯ ಸಿಕ್ಕಿತ್ತು. ಈ ಮಾದರಿಯ ಸಿನಿಮಾಗಳು ಮನುಷ್ಯರ ಸೂಕ್ಷ್ಮ ಸ್ತರಗಳ ಶೋಧ ನಡೆಸಿದ್ದು ಒಂದು ಸಕಾರಾತ್ಮಕ ಬೆಳವಣಿಗೆ. ಆದರೆ, ಅದೇ ಸಂದರ್ಭದಲ್ಲಿ ಮುಖ್ಯವಾಹಿನಿ ಸಿನಿಮಾಗಳ ಚಾರಿತ್ರಿಕ ಕೊಡುಗೆಯನ್ನು ಕೆಲವರು ಕಡೆಗಣಿಸಿದ್ದು ಅನಾರೋಗ್ಯಕರ ಪ್ರವೃತ್ತಿ. ಹೊಸ ಅಲೆ ಸಿನಿಮಾಗಳೆಲ್ಲವೂ ಹೇಗೆ ಹೊಸದಾಗಿರಲಿಲ್ಲವೋ, ಅಥವಾ ಎಲ್ಲವೂ ಕಲಾತ್ಮಕವಾಗಿರಲಿಲ್ಲವೋ ಹಾಗೆಯೇ ಮುಖ್ಯವಾಹಿನಿ ಸಿನಿಮಾಗಳೆಲ್ಲವೂ ಉತ್ತಮ ಆಗಿರಲಿಲ್ಲವೆಂಬುದು ನಿಜವಾದರೂ ಅವುಗಳ ಕೊಡುಗೆ ಕಡಿಮೆಯಲ್ಲ. ಬಹುಪಾಲು ಮುಖ್ಯವಾಹಿನಿ ಸಿನಿಮಾಗಳು ಸದಭಿರುಚಿ ಮತ್ತು ಸಾಮಾಜಿಕ ಕಳಕಳಿಯ ಆಕೃತಿಗಳಾಗಿದ್ದವು. ಉದ್ಯಮ ಮತ್ತು ಕಲೆಯ ಸಮತೋಲನದ ಜನಪ್ರಿಯ ಸೃಷ್ಟಿರೂಪಗಳಾಗಿದ್ದವು. ನನ್ನ ಈ ಮಾತಿಗೆ ರಾಜಕುಮಾರ್ ಅವರ ಅಭಿನಯದ ಸಿನಿಮಾಗಳು ಸಾರ್ಥಕ ಸಮರ್ಥನೆಯಾಗುತ್ತವೆ. ರಾಜಕುಮಾರ್ ಅವರು ತಾರಾಮೌಲ್ಯ ಪಡೆದ ಮೇಲೆ